ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯುಷ್ ಆದ್ದ. [ನಂ. 21.

ಬೆಂಗಳೂರು, ಗುರುವಾರ, ಮೇ ತಾ॥ 27, ಸ॥ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಲೆಕ್ಟೋಲರವರು, ಪಬ್ಲಿಕ್‌ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇರ್ಸ ವ ಎಡ್ಯುಕೇರ್ಸ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಹೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇರ್ಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ತಾರೀಖು 18ನೆ ಮೇ 1909.

ನಂ. 11520—ಸ್ಯಾನಿಟರಿ 70-08-50, ಸಮಸ್ತ ಜನರ ತಿಳಿವಳಿಕೆ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.		ತಾಲ್ಲೂಕು.
ಸರಗೂರು	...	ಚಾಮರಾಜನಗರ
ಮಳವಳ್ಳಿ	...	ಡಿಟೋ
ಮುತ್ತನಹಳ್ಳಿ	...	ಮಳವಳ್ಳಿ
ಗಂಜಾಂ	...	ಶ್ರೀರಂಗಪಟ್ಟಣ
ಗುಂಡ ಪೇಟೆ	...	ಗುಂಡ್ಲಪೇಟೆ
ಬಿಳ್ಳುಳ್ಳಿ	...	ಎಡತೊರೆ
ದೊರನಹಳ್ಳಿ	...	ಡಿಟೋ
ಕೆಂಪಲಾಪುರ	...	ಹುಣಸೂರು

ತಾರೀಖು 17ನೆ ಮೇ 1909.

ನಂ. ಜು. 3524—ಪೋಲೀಸು. 178-08—2, 1890ನೆ ಇಸವಿಯ 6ನೆ ನಂಬರ್ ಮೈಸೂರು ಆಯುಧಗಳ ರೆಗ್ಯುಲೇಷನಿನ 25ನೆ ಪ್ರಕರಣದ ಮೇರೆಗೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಹರಿಹರ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್‌ರವರನ್ನು, ಸದರಿ ಸಬ್ ತಾಲ್ಲೂಕಿನಲ್ಲಿ ಮೇಲ್ಕಂಡ ರೆಗ್ಯುಲೇಷನಿನ 14ನೆ ಪ್ರಕರಣದ (e) ಕಲಮಿನ ಮೇರೆಗೆ ಶಿಕ್ಷಿಸಲ್ಪಡತಕ್ಕ ತಪ್ಪಿತಗಳ ವಿಚಾರವಾಗಿ ಕೋಧನೆಗಳನ್ನು ನಡಿಸತಕ್ಕ ಆಫಿಸರನ್ನಾಗಿ ಮೊಕರರ್ರಮಾಡಲು ಹುಕುಂ ದಯಪಾಲಿಸಿರುತ್ತಾರೆ.

ತಾರೀಖು 20ನೆ ಮೇ 1909.

ನಂ. ಜ. 6550—ಜ. ಮಿ. 313-08—2, ಮೈಸೂರು ಶಾಸನಾನ್ವೇಷಣದ ಇಲಾಖೆಯ ಚಾರ್ಜಿನಲ್ಲಿರುವ ಆಫೀಸರ್ ಮಿ|| ಆರ್. ನರಸಿಂಹಾಚಾರ್, ಎಂ. ಎ. ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣದ ಮೇರೆಗೆ, 1909ನೆ ಇಸವಿಯ ಏಪ್ರಿಲ್ 20ನೆ ತಾರೀಖಿನ ಲಾಗಾಯಿತು 8 ದಿವಸಗಳ ಪ್ರಿವಿಲೇಜ್ ರಜಾ ಕೊಡಲಾಯಿತು.

ತಾರೀಖು 18ನೆ ಮೇ 1909.

ನಂ. ರೆ. 9589—ಫಾ. 110—06—7, ಸ್ಯ 1900ನೆ ಇಸವಿ 11ನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣವನ್ನನುಸರಿಸಿ ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದೂರ್‌ರವರ ಸರಕಾರದವರು ಪ್ರಸಿದ್ಧಪಡಿಸುವದೇನಂದರೆ:—ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿ ಉಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ 1909ನೆ ಜೂನ್ ಗುರ್ರೇ ತಾರೀಖಿನಿಂದ ಸ್ಟೇಟ್ ಫಾರೆಸ್ಟ್‌ವಾಗಿ ಏರ್ಪಡಿಸಲ್ಪಟ್ಟಿರುತ್ತದೆ.

ಷೆಡ್ಯೂಲ್.

ಡಿವಿಜನ್.	ತಾಲ್ಲೂಕು.	ಬ್ಲಾಕಿನ ಹೆಸರು.	ಸುಮಾರು ವಿಸ್ತೀರ್ಣ.	ಚಕ್ಕುಬಂದಿ.
ತುಮಕೂರು.	ಪಾವಗಡ.	ಯರ್ರಮ್ಮನಹಳ್ಳಿ	1,525 ಎಕ್ರೆ, 22 ಗುಂಟೆ.	ಉತ್ತರಕ್ಕೆ—ತಿಪ್ಪೇರುದ್ರನದುರ್ಗ ಸರ್ವೆ 40ನೆ ನಂಬರಿನ ಈಶಾನ್ಯ ಮೂಲೆಯಿಂದ ಲೈನು ಹೊರಟು ಈಶಾನ್ಯ ದಿಕ್ಕಾಗಿ ತಿಪ್ಪಗಾನಹಳ್ಳಿ ಸರ್ವೇ 47ನೆ ನಂಬರಿನ ದಕ್ಷಿಣ ಗಡಿ ಮೇಲೆ ಹೋಗುತ್ತದೆ. ಅಲ್ಲಿಂದ ಈಶಾನ್ಯ ದಿಕ್ಕಾಗಿ ಸರ್ವೆ ನಂಬರು 47ರ ಆಗ್ನೇಯದಲ್ಲಿ ಹೋಗುತ್ತದೆ. ಅಲ್ಲಿಂದ ಹೊಸದುರ್ಗದ ಸರ್ವೆ 92ನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ಪೂರ್ವಕ್ಕೆ ಅದೇ ಸರ್ವೆ 92ನೆ ನಂಬರು ಆಗ್ನೇಯ ಮೂಲೆಗೆ ಬರುತ್ತದೆ. ಅಲ್ಲಿಂದ ವಾಯವ್ಯಕ್ಕೆ ಅದೇ ಸರ್ವೆ ಪೂರ್ವಕಡೆಯಲ್ಲಿ ಬಂದು ಅದೇ ಗ್ರಾಮದ ಸರ್ವೆ 89ನೆ ನಂಬರು ನೈರುತ್ಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ಪೂರ್ವಕ್ಕೆ ಅದೇ ಸರ್ವೆ ನಂಬರಿನ ದಕ್ಷಿಣ ದಿಕ್ಕಿನಲ್ಲಿ ಬಂದು ಅದರ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಉತ್ತರಕ್ಕೆ ಅದೇ ಸರ್ವೆ ನಂಬರಿನ ಪೂರ್ವ ದಿಕ್ಕಿನಲ್ಲಿ ಬಂದು ಆ ಗ್ರಾಮದ 90ನೆ ಸರ್ವೆ ನಂಬರಿನ ನೈರುತ್ಯ ಮೂಲೆಗೆ ತಗಲುತ್ತದೆ. ಅಲ್ಲಿಂದ ಪೂರ್ವಕ್ಕೆ ಅದೇ ಹೊಸದುರ್ಗದ ಗ್ರಾಮದ ಸರ್ವೆ 90, 87, 84 ಮತ್ತು 83ನೆ ನಂಬರುಗಳ ಮೇಲೆ ಹೊರಟು ಸರ್ವೆ 83ನೆ ನಂಬರಿನ ಆಗ್ನೇಯ ಮೂಲೆಗೆ ಕೂಡುತ್ತದೆ. ಪೂರ್ವಕ್ಕೆ—ತರುವಾಯ ಲೈನು ದಕ್ಷಿಣಕ್ಕೆ ಮತ್ತು ಪಶ್ಚಿಮವಾಗಿ ಹೊರಟು ಹೊಸದುರ್ಗದ 88ನೆ ಸರ್ವೆ ನಂಬರು, ಸೂಳೆನಾಯಕನಹಳ್ಳಿಯ 46ನೆ ಸರ್ವೆ ನಂಬರು ಇವುಗಳಲ್ಲಿ ಹೊಸದುರ್ಗದಿಂದ ಯರ್ರಮ್ಮನಹಳ್ಳಿಗೆ ಹೋಗುವ ಭಂಡಿ ಜಾಡಿನವೇಲೆಯೇ ಹೊರಟು ಸೂಳೆನಾಯಕನಹಳ್ಳಿಯ ಸರ್ವೆ ನಂಬರು 46ರ ಪಶ್ಚಿಮ ಎಲ್ಲೆಕಟ್ಟನ್ನು ಕೊನೇಲಿ ಕಂಡ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಸುಮಾರು 2 ಫರಲಾಂಗುದೂರದಲ್ಲಿ ಸೇರುವ ವರೆಗೂ ಹೋಗುತ್ತದೆ. ತರುವಾಯ ಸೂಳೆನಾಯಕನಹಳ್ಳಿಯ ಸರ್ವೆ ನಂಬರು 46, ಯರ್ರನಹಳ್ಳಿಯ ಸರ್ವೆ ನಂಬರುಗಳು 11 ಮತ್ತು 10 ಇವುಗಳ ಪಶ್ಚಿಮ ಪಾರ್ಶ್ವದ ಮೇಲೆಯೇ ಮೇಲ್ಕಂಡ ಬಂಡಿ ಜಾಡನ್ನು ಅನುಸರಿಸಿ ಆಗ್ನೇಯವಾಗಿ ಹೋಗಿ ತರುವಾಯ ಯರ್ರಮ್ಮನಹಳ್ಳಿಯ ಸರ್ವೆ ನಂಬರು 12ರಲ್ಲಿ ಕೊನೇಲಿ ಕಂಡ ಗ್ರಾಮದ ಸರ್ವೆ ನಂಬರು 9ರ ವಾಯವ್ಯ ಮೂಲೆಯನ್ನು ಮುಟ್ಟುವ ವರೆಗೂ ಹೋಗುತ್ತದೆ. ದಕ್ಷಿಣಕ್ಕೆ—ಅನಂತರದಲ್ಲಿ ಲೈನು ನೈರುತ್ಯವಾಗಿ ಯರ್ರಮ್ಮನಹಳ್ಳಿಯ ಸರ್ವೆ ನಂಬರು 9 ಮತ್ತು 14 ಇವುಗಳ ಪಶ್ಚಿಮ ಪಾರ್ಶ್ವದ ಮೇಲೆ ಹೊರಟು ತರುವಾಯ ಮೇಲ್ಕಂಡ ಗ್ರಾಮದ ಸರ್ವೆನಂಬರು 14 ಮತ್ತು 16 ಇವುಗಳ ಉತ್ತರ ಪಾರ್ಶ್ವಗಳಲ್ಲಿ ನೈರುತ್ಯಾಭಿಮುಖವಾಗಿ ಹೋಗಿ ಕಡೇ ನಂಬರಿನ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯವ್ಯಕ್ಕೆ ಸರ್ವೆ 35ನೆ ನಂಬರು ಪೂರ್ವ ದಿಕ್ಕಿನ ಉದ್ದಕ್ಕೂ ಬಂದು ಅದರ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ನೈರುತ್ಯಕ್ಕಾಗಿ ಅದೇ ಸರ್ವೆ ನಂಬರಿನ ಉತ್ತರ ಕಡೇಲಿ ಬಂದು ಅಲ್ಲಿಂದ ಅದರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ದಕ್ಷಿಣಕ್ಕೆ, ಅದೇ ಸರ್ವೆ ನಂಬರಿನ ಪಶ್ಚಿಮ ಕಡೇಲಿ ಹೊರಟು ಅದರ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ಸರ್ವೆ 40, 39ನೆ ನಂಬರುಗಳ ಉತ್ತರ ಪಾರ್ಶ್ವಗಳಲ್ಲಿ ಅದೇ ಗ್ರಾಮದ ಸರ್ವೆ 38ನೆ ನಂಬರು ಆಗ್ನೇಯ ಮೂಲೆಯನ್ನು ಸೇರುವ ವರಿಗೂ ಹೋಗುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಯರ್ರಮ್ಮನಹಳ್ಳಿ ಸರ್ವೆ ನಂಬರು 38ರ ಪೂರ್ವ ದಿಕ್ಕಿನಲ್ಲಿ ಹೊರಟು ಅದೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ವಾಯವ್ಯ ಮುಖವಾಗಿ ತಿಪ್ಪೈಯ್ಯ ದುರ್ಗದ ಸರ್ವೆ ನಂಬರು 43ರ ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಿ ಹೊರಟು ಅದೇ ಗ್ರಾಮದ 42ನೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ತರುವಾಯ 42ನೆ ಸರ್ವೆ ನಂಬರಿನ ಪೂರ್ವಕ್ಕೆ ಉತ್ತರದಲ್ಲಿ ಹೋಗಿ ಅಲ್ಲಿಂದ ಪಶ್ಚಿಮಕ್ಕಾಗಿ ಅದೇ ಸರ್ವೆ 42ನೆ ನಂಬರಿನ ಪಕ್ಕದಲ್ಲಿ ಬಂದು ಅದೇ ಗ್ರಾಮದ 39ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯನ್ನು ಕೂಡುವ ವರೆಗೂ ಹೋಗುತ್ತದೆ. ಅಲ್ಲಿಂದ ಉತ್ತರಕ್ಕೂ, ಈಶಾನ್ಯಕ್ಕೂ ಬಾಗಿಕೊಂಡು ಬಂದು ಸರ್ವೆ 39 ಮತ್ತು 40ನೆ ನಂಬರುಗಳ ಪೂರ್ವದಿಕ್ಕಿನಲ್ಲಿ ಕಡೇಲಿ ಹೊರಟು ಹಾದು ಹೊರಟ ಸ್ಥಳವನ್ನು ಕೂಡುತ್ತದೆ.

ಷರಾ.

ಈ ಕೆಳಗೆ ಕಂಡ ದಾರಿಗಳಲ್ಲಿ ಶಿರುಗುವ ಹಕ್ಕನ್ನು ಮಂಜೂರು ಮಾಡಿದೆ.

1ನೇದು ಜನ ಜಾನವಾರುಗಳಿಗೆ.

2ನೇದು ಜಾನುವಾರುಗಳಿಗೆ.

1. ಯರ್ರಮ್ಮನಹಳ್ಳಿಯ ಸರ್ವೆ 12 ಸೂಳೆನಾಯಿಕನಹಳ್ಳಿಯ ಸರ್ವೆ 46 ಮತ್ತು ಹೊಸದುರ್ಗ ಸರ್ವೆ 36 ಈ ನಂಬರುಗಳ ಮೇಲೆ ಯರ್ರಮ್ಮನಹಳ್ಳಿಯಿಂದ ಹೊಸದುರ್ಗಕ್ಕೆ ಹೋಗುವ ದಾರಿ—6 ಗಜ ಅಗಲ 12 ಫರಲಾಂಗು ಉದ್ದ ಇದು ಯರ್ರಮ್ಮನಹಳ್ಳಿ ಸರ್ವೆ 9ನೆ ನಂಬರಿನ ವಾಯವ್ಯ ಮೂಲೆಯಲ್ಲಿ ಸೇರಿ ಫಾರಸ್ಟನ್ನು ಪ್ರವೇಶಿಸಿ ಈಶಾನ್ಯಮುಖವಾಗಿ ಹೋಗಿ ಹೊಸದುರ್ಗದ ಸರ್ವೆ 83ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

2. ಸರ್ವೆ 12ನೆ ನಂಬರಿನಲ್ಲಿ ಕುಂಟೆಗೆ ನೀರಿಗೆ ದನಗಳನ್ನ ತೆಗೆದುಕೊಂಡು ಹೋಗಲು ಹೊಸದುರ್ಗದ ರೈತರಿಗೆ ದಾರಿ ಹಕ್ಕು. ಈ ದಾರಿ ಸರ್ವೆ 89ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಸ್ಟೇಟು ಫಾರೆಸ್ಟನ್ನು ಪ್ರವೇಶಿಸಿ ಆಗ್ನೇಯ ದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂಬರು 88 ಮತ್ತು ಯರ್ರಮ್ಮನಹಳ್ಳಿ ಸರ್ವೆ 12ನೆ ನಂಬರು ಮೇಲೆ ಹೊರಟು ಕಡೇ ಸರ್ವೆ ನಂಬರಿನ ಆಗ್ನೇಯ ಮೂಲೇಲಿ ಇರುವ ಕುಂಟೆಗೆ ಹೋಗುತ್ತದೆ. 150 ಅಡಿ ಅಗಲ, ಉದ್ದ ಸುಮಾರು 10 ಫರಲಾಂಗು.

B. ಈ ಕೆಳಗೆ ಕಂಡ ಜಮೀನಿನ ಮೇಲೆ ಪಟ್ಟೆ ಹಕ್ಕು ಮಂಜೂರು ಮಾಡಿದೆ. ಈ ಜಮೀನನ್ನು ಫಾರೆಸ್ಟಿಗೆ ಸೇರಿಸಿಕೊಳ್ಳದೆ ಡಿವಾರ್ಕೇಷನ್ ಲೈನ್ ಮಾಡಿಸಿ ಆವರಣವಾಗಿ ಬಿಟ್ಟಿರುತ್ತದೆ.

ಗ್ರಾಮ.	ನಂಬರು.	ಸ್ಕೀಂ.	ಗುಂಟೆ.	ಷರಾ.
ಸೂಳೆನಾಯಕನಹಳ್ಳಿ	13	...	...	ಈ ಜಮೀನಿಗೆ ಜನಗಳು ಮತ್ತು ಉಳಿವ ದನಗಳು ಫಾರೆಸ್ಟ್ ಮೂಲಕ ಪ್ರವೇಶಿಸುವುದಕ್ಕೆ ಅಪ್ಪಣೆ ಇರುತ್ತದೆ. ಅಗಲ 4 ಅಡಿ ಯರ್ರಮ್ಮನಹಳ್ಳಿ ಸರ್ವೆ 12ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಸ್ಟೇಟ್ ಫಾರೆಸ್ಟಿಗೆ ಪ್ರವೇಶಿಸುವ ಬಂದು ದಾರಿಯು ಪೂರ್ವಾಭಿಮುಖವಾಗಿ $2\frac{1}{2}$ ಫರ್ಲಾಂಗುದೂರ ಹೋಗಿ ಸದರೀ ಜಮೀನನ್ನು ಸೇರುತ್ತದೆ.

ಹುಕುಂ ಖವೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿ.